# ವ್ಯಸನ ಮುಕ್ತರಾದರೆ ಸ್ವಸ್ಥ ಸಮಾಜ

## ಎನ್‌ಐಟಿಕೆ ಡೀನ್ ಪ್ರೊ.ಎ.ಸಿ.ಹೆಗ್ಡೆ ಅಭಿಮತ



**ಸುರತ್ಕಲ್‌ನ ಎನ್‌ಐಟಿಕೆಯಲ್ಲಿ ಮಾದಕ ದ್ರವ್ಯ ಮುಕ್ತ ಭಾರತ ಕಾರ್ಯಕ್ರಮ ನಡೆಯಿತು. ಎನ್‌ಐಟಿಕೆ ಡೀನ್ ಪ್ರೊ.ಎ.ಸಿ.ಹೆಗ್ಡೆ, ಪ್ರೊ.ಲಕ್ಷ್ಮೀನಿಧಿ, ಎನ್‌ಐಟಿಕೆ ಕುಲಸಚಿವರು, ಆಡಳಿತ ಮುಖ್ಯಸ್ಥರು, ಬೋಧಕರು, ಸಿಬ್ಬಂದಿ ಭಾಗವಹಿಸಿದ್ದರು.**

**ಮಂಗಳೂರು:** ಮಾದಕ ದ್ರವ್ಯ ವ್ಯಸನ ಮುಕ್ತರಾದರೆ ಸ್ವಸ್ಥ ಸಮಾಜ ನಿರ್ಮಾಣ ಸಾಧ್ಯ. ಬಹುತೇಕ ಆರೋಪಿಗಳು ಮಾದಕ ವ್ಯಸನಿಗಳಾಗಿರುವುದು ತನಿಖೆಯಿಂದ ಬಯಲಾಗುತ್ತದೆ. ಯುವ ಜನತೆ ಈ ಕುರಿತು ಎಚ್ಚರಿಕೆ ವಹಿಸಬೇಕು ಎಂದು ಎನ್‌ಐಟಿಕೆ ಸುರತ್ಕಲ್‌ನ ವಿದ್ಯಾರ್ಥಿ ಕಲ್ಯಾಣ ವಿಭಾಗದ ಡೀನ್ ಪ್ರೊ.ಎ.ಸಿ.ಹೆಗ್ಡೆ ಹೇಳಿದರು.

ಕೇಂದ್ರ ಸರ್ಕಾರದ ಶಿಕ್ಷಣ ಸಚಿವಾಲಯದ ನಿರ್ದೇಶನದಂತೆ ಸುರತ್ಕಲ್‌ನ ಎನ್ ಐಟಿಕೆಯಲ್ಲಿ ಅಂತಾರಾಷ್ಟ್ರೀಯ ಮಾದಕ ದ್ರವ್ಯ ಸೇವನೆ ಮತ್ತು ಅಕ್ರಮ ಕಳ್ಳಸಾಗಣೆ ವಿರೋಧಿ ದಿನಾಚರಣೆಯ ಅಂಗವಾಗಿ ಮಾದಕ ದ್ರವ್ಯ ಮುಕ್ತ ಭಾರತ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಅವರು ಮಾತನಾಡಿದರು.

ಈ ಸಂದರ್ಭದಲ್ಲಿ ಎನ್‌ಐಟಿಕೆ ಸುರತ್ಕಲ್‌ನ ಅಧ್ಯಾಪಕರ ಕಲ್ಯಾಣ ವಿಭಾಗದ ಡೀನ್ ಪ್ರೊ.ಲಕ್ಷ್ಮೀನಿಧಿ, ಎನ್‌ಐಟಿಕೆ ಕುಲಸಚಿವರು, ಆಡಳಿತ ಮುಖ್ಯಸ್ಥರು, ಬೋಧಕರು ಮತ್ತು ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

Vijayavani, Date: 27/06/24, p, no-2